# ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ
ಮಲ್ಲೇಶ್ವರಂ, ಬೆಂಗಳೂರು–560003.

# KARNATAKA SECONDARY EDUCATION EXAMINATION BOARD
Malleshwaram, Bengaluru – 560003.

## 2020-21 ಸಾಲಿನ ಮಾದರಿ ಪ್ರಶ್ನೆ ಪತ್ರಿಕೆ – 2

**ವಿಷಯ : ತೃತೀಯ ಭಾಷೆ – ಕನ್ನಡ** | **ವಿಷಯ ಸಂಕೇತ : 62-K**

**ಅವಧಿ : 3 ಗಂಟೆ** | **ಗರಿಷ್ಠ ಅಂಕಗಳು : 80**

**ಶಾಲಾ ಅಭ್ಯರ್ಥಿಗಳಿಗೆ**

---

### ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ 38 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 8 x 1 = 8**

1. ಈ ಕೆಳಗಿನವುಗಳಲ್ಲಿ ತದ್ಭವ ರೂಪ :

   A. ಕವಿ

   B. ವರ್ಷ

   C. ಕಾವ್ಯ

   D. ಸಿರಿ

2. 'ಪತಾಕೆ' ಪದದ ಅರ್ಥ :

   A. ಧ್ವಜ

   B. ಪರಾರಿ

   C. ಪರಾಕು

   D. ದ್ವಿಜ

3. 'ಆತ್ಮಾರ್ಥಕ' ಸರ್ವನಾಮದ ಉದಾಹರಣೆ :

   A. ನಾನು

   B. ಅವರು

   C. ತಾನು

   D. ನೀನು

4. ಕಾವ್ಯವನ್ನು ವಾಚಿಸುವಾಗ ಅರ್ಥಕ್ಕೆ ಅಡ್ಡಿಯಾಗದಂತೆ ಉಸಿರು ತೆಗೆದು ಕೊಳ್ಳಲು ನಿಲ್ಲಿಸುವ ತಾಣ :

   A. ಯತಿ

   B. ಪ್ರಾಸ

   C. ಗುಂಪು

   D. ಪ್ರಸ್ತಾರ

5. "ಗೋಡೆಗೆ ಕಪ್ಪ ಬಳಿದ್ಹಂಗೆ" – ವಾಕ್ಯದಲ್ಲಿರುವ ಅಲಂಕಾರ :

   A. ರೂಪಕ

   B. ಉತ್ಪ್ರೇಕ್ಷಾ

   C. ಉಪಮಾ

   D. ದೃಷ್ಟಾಂತ

6. ಗೊರೂರರ ಜೇಬಿನಲ್ಲಿ ಎರಡು ಡಾಲರ್ ಜೊತೆ ಇದ್ದುದು.

   A. ಕೈಚೀಲ

   B. ವಿಳಾಸದ ಚೀಟಿ

   C. ರಿಟರ್ನ್ ಟಿಕೆಟ್

   D. ಬಿಸ್ಕೆಟ್

7. ವರ್ಗೀಯ ವ್ಯಂಜನಗಳ ಒಟ್ಟು ಸಂಖ್ಯೆ :

   A. 6

   B. 9

   C. 25

   D. 34

8. ಕೊಡಗಿನ ಗೌರಮ್ಮನವರ ಪತಿಯ ಹೆಸರು :

   A. ಜಿ.ಎಂ. ಮಂಜುನಾಥಯ್ಯ

   B. ಎನ್.ಎಸ್. ರಾಮಯ್ಯ

   C. ಬಿ.ಟಿ. ಗೋಪಾಲಕೃಷ್ಣಯ್ಯ

   D. ಸುಬ್ರಹ್ಮಣ್ಯ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4 x 1 = 4**

9. ಬೆಳಕ ಸತ್ವ : ಬಾಣ ಬಿರುಸು : : ರಸ ಕವಿತ್ವ : ____________

10. ಗುಂಡಿಲ್ಲದ : ಲೋಪಸಂಧಿ : : ಮಳೆಗಾಲ : ____________

11. ಪಟಪಟ : ಅನುಕರಣಾವ್ಯಯ : : ಬೇಗ ಬೇಗ : ____________

12. ಕರದಲಿ : ಜಪಮಣಿ : : ಬಾಯಲಿ : ____________

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 4 x 1 = 4**

13. ವಿಶುವಿನ ಎದೆಯಲ್ಲಿ ಎಂದೆಂದಿಗೂ ನಿಲ್ಲದಂತೆ ಮೊಳಗುತ್ತಿದ್ದ ಪದ ಯಾವುದು?

14. ಗಾಂಧೀಜಿಯವರು ಕೊಟ್ಟ ಮಂತ್ರ ಯಾವುದು?

15. 'ಬಿಳಿಮಿನಾರು' ಯಾವ ಧರ್ಮದ ಸಂಕೇತವಾಗಿದೆ?

16. ಮಹಾಶಿಲ್ಪಿ ವಿಶುವಿಗೆ ಧರ್ಮಪದನು ನೀಡಿದ ಆಶ್ವಾಸನೆಯೇನು?

## IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 8 x 2 = 16

17. ಕೊಡಗಿನ ಗೌರಮ್ಮನವರ ಬರವಣಿಗೆಗೆ ಪೂರಕವಾದ ವಿಚಾರಗಳಾವುವು?

18. ಮೋಹನಪುರದ ಸತ್ಯಾಗ್ರಹಿಗಳು ಮಾಡುತ್ತಿದ್ದ ಘೋಷಣೆಗಳಾವುವು?

19. ಪೋರ್ಚುಗೀಸರು ಭಾರತೀಯರನ್ನು ಯಾವ ರೀತಿಯಲ್ಲಿ ಆರ್ಥಿಕವಾಗಿ ಶೋಷಣೆ ಮಾಡುತ್ತಿದ್ದರು?

20. ಮೋಡಗಳು ಕಾಣಿಸಿಕೊಂಡಾಗ ರೈತರು ತಮಗಾದ ಸಂತೋಷವನ್ನು ವ್ಯಕ್ತಪಡಿಸುವ ಪರಿಯನ್ನು ಕುರಿತು ಬರೆಯಿರಿ.

21. ಧರ್ಮಪದನಿಗೆ ವಿಷ ಉಣಿಸಲು ಪ್ರಯತ್ನಿಸಿದ್ದೇಕೆ?

22. ಶರೀಫರು ತಮಗಾದ ದುಃಖವನ್ನು ಕಡಿಮೆ ಮಾಡಿಕೊಂಡ ಬಗೆಯನ್ನು ತಿಳಿಸಿರಿ.

23. ಸತೀಶ ಕುಲಕರ್ಣಿಯವರು ಎಂತಹ ನಾಡನ್ನು ಕಟ್ಟುತ್ತೇವೆ ಎಂದು ಆತ್ಮವಿಶ್ವಾಸದಿಂದ ಹೇಳಿದ್ದಾರೆ?

24. ಸ್ವರ್ಗ–ನರಕಗಳ ಬಗೆಗೆ ಬಸವಣ್ಣನವರು ಕೊಟ್ಟಂತಹ ಹೊಸ ಸೂತ್ರ ಯಾವುದು?

## V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ. 2 x 3 = 6

25. "ಸಾಕು ಮಾಡಿರಿ ನಿಮ್ಮ ಪುರಾಣ"

26. "ಸಾವಿರಾವು ಕೆರೆ ತುಂಬಿ"

## VI. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 4 x 3 = 12

27. ಕರ್ಬಲಾ ಮತ್ತು ಅಲಾವಿಗಳ ನಡುವಿನ ವ್ಯತ್ಯಾಸವನ್ನು ತಿಳಿಸಿರಿ.

28. ಗಾಂಧೀಜಿಯವರು ಅವಾಕ್ಕಾಗಲು ಕಾರಣವಾದ ಸನ್ನಿವೇಶವನ್ನು ವಿವರಿಸಿರಿ.

29. 'ಕಟ್ಟುತೇವ ನಾವು' ಕವಿತೆಯು ಸಮಾಜದಲ್ಲಿರುವ ಅಸಮಾನತೆಯನ್ನು ಹೋಗಲಾಡಿಸಬೇಕಾಗಿರುವ ಅವಶ್ಯಕತೆಯನ್ನು ಹೇಗೆ ಪ್ರತಿಪಾದಿಸಿತ್ತದೆ?

30. ಬಸವಣ್ಣನವರ ವಚನಗಳಲ್ಲಿ ಕಂಡುಬರುವ ಮಾನವೀಯ ಮೌಲ್ಯಗಳು ಎಲ್ಲಾ ಕಾಲಕ್ಕೂ ಮೆಚ್ಚುವಂತಿವೆ. ಏಕೆ?

**VII. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪವನ್ನು ಬರೆಯಿರಿ.** **2 x 3 = 6**

31. ವಿಜಯಲಕ್ಷ್ಮೀ ಬಾಳೇಕುಂದ್ರಿ

32. ಕೆ.ಎಸ್. ನಿಸಾರ್ ಅಹಮದ್

**VIII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ.** **1 x 3 = 3**

33. ಮಾಡಿದ್ದು ಉಣ್ಣೋ ಮಹಾರಾಯ

ಅಥವಾ

ಕೈ ಕೆಸರಾದರೆ ಬಾಯಿ ಮೊಸರು

**IX. ಕೆಳಗಿನ ಒಂದು ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1 x 4 = 4**

34. ಗೊರೂರು ರಾಮಸ್ವಾಮಿ ಅಯ್ಯಂಗಾರರ ಹಾಸ್ಯ ಪ್ರವೃತ್ತಿಯನ್ನು 'ಲಾಕಪ್ಪಿನಲ್ಲಿ ಒಂದು ರಾತ್ರಿ' ಗದ್ಯದ ಆಧಾರದಿಂದ ವಿವರಿಸಿರಿ.

ಅಥವಾ

ಮಿನಿಪೊಲೀಸ್ ನಗರದಲ್ಲಿ ಎದುರಾದ ಸಮಸ್ಯೆಗಳಾವುವು? ವಿವರಿಸಿರಿ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1 x 4 = 4**

35. ಕಂಚುಗಾರನ ______________________

______________________

______________________

______________________ ಪೂಜೆ ಮಾಡುವುದು

ಅಥವಾ

ನಾನು ಎಂಬುದ ______________________

______________________

______________________

______________________ ಕಾರ್ಯಗಳೆಲ್ಲವು

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**4 x 1 = 4**

ತಂದೆ ಸಿಗಲಿಲ್ಲ. ಬಂದು ನೋಡಿದರೆ ಇಲ್ಲಿ ಆ ತಾಯಿ ಇರಲೇ ಇಲ್ಲ. ಅವಳ ಕಣ್ಣೀರು ಹರಿದು ಹೋಗಿ ಪಕ್ಷಿ ಪ್ರಾಣಿಗಳು ಅತ್ತು ಸುರಿಸಿದ್ದವಲ್ಲ ಆ ಕಣ್ಣೀರಿಗೆ ಸೇರಿ ಹೋಗಿತ್ತು. ಅದೊಂದು ದೊಡ್ಡ ಹೊಳೆಯಾಗಿತ್ತು. ಭರತ ತಾನು ಕಣ್ಣೀರು ಸುರಿಸಿದನು. ಕಣ್ಣೀರು ಸುರಿಸಿ ಸುರಿಸಿ ಸಣ್ಣಗಾಗಿ ಹೋದನು. ಅಷ್ಟರಲ್ಲಿ ಒಂದು ದೇವತೆ ಬಂದು ಅವನಿಗೊಂದು ಚಿನ್ನದಕೋಲು ಕೊಟ್ಟಿತು. "ಅಳಬೇಡ, ಭರತ ಕುಮಾರ ಈ ಕೋಲು ಹಿಡಿದು ಕೊಂಡು ಹುಡುಕು ನಿನ್ನ ತಾಯಿಯನ್ನು" ಎಂದಿತು. ಭರತ ಹುಡುಕಿದನು. ಆ ತಾಯಿ ಸಿಗಲಿಲ್ಲ. ಆಕೆಗೆ ಕರೆ ಕೇಳಲಿಲ್ಲ. ಮತ್ತೊಮ್ಮೆ ಅಳುತ್ತ ಕುಳಿತುಬಿಟ್ಟನು. ಅವನ ದುಃಖವೆಲ್ಲ ಅವನ ತಾಯಿಯ ದುಃಖವಿತ್ತಲ್ಲ ಅದರ ಸಂಗಡ ಸೇರಿ ಕಣ್ಣೀರೆಲ್ಲ ಮೋಡವಾಗಿ ಬಾನೆಲ್ಲ ಮುಸುಕಿ ಕತ್ತಲಾಗಿ ಹೋಗಿತ್ತು. ಆಗ ಅವನು "ಎಲೆ ಸೂರ್ಯ, ಎಲ್ಲಿದ್ದೀಯೆ, ಬೆಳಕು ಬೇಕು ನನಗೆ" ಎಂದು ಧೈರ್ಯದಿಂದ ಕೂಗಿದನು. ಸೂರ್ಯನು ಬಂದು, "ಭರತ ಕುಮಾರ, ನಿನಗಾಗಿ ನನ್ನ ಕೈಲಾದ ಸಹಾಯ ಮಾಡುತ್ತೇನಯ್ಯ" ಎಂದವನೇ ಆ ಮೋಡಗಳನ್ನೆಲ್ಲ ಕರಗಿಸಿ ಕತ್ತಲೆಯನ್ನೆಲ್ಲ ಸುಟ್ಟು ಬೂದಿ ಮಾಡಿಬಿಟ್ಟು "ನಿನಗಾಗಿ ಕೆಲಸ ಮಾಡಿದ್ದೇನೆ ನೋಡು" ಎಂದು ಹೇಳಿ ಹೊರಟು ಹೋಗಿ ಬಿಟ್ಟನು.

**36. ಪ್ರಶ್ನೆಗಳು :**

ಎ) ರಾಜಕುಮಾರ ಸಣ್ಣಗಾಗಲು ಕಾರಣವೇನು?

ಬಿ) ರಾಜಕುಮಾರನಿಗೆ ದೇವತೆಯು ಮಾಡಿದ ಸಹಾಯವೇನು?

ಸಿ) ರಾಜಕುಮಾರನಿಗೆ ಸೂರ್ಯನು ಹೇಗೆ ಸಹಾಯ ಮಾಡಿದನು?

ಡಿ) ಬಾನೆಲ್ಲ ಮುಸುಗಿ ಕತ್ತಲಾಗಿ ಹೋಗಿತ್ತು. ಏಕೆ?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.** **1 x 4 = 4**

37. ಹವ್ಯಾಸಗಳ ಮಹತ್ವ

ಅಥವಾ

ರಾಷ್ಟ್ರೀಯ ಹಬ್ಬಗಳು

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** **1 x 5 = 5**

38. ನಿಮ್ಮನ್ನು ಮಂಡ್ಯದ ಸರ್ಕಾರಿ ಪ್ರೌಢಶಾಲೆಯ 'ವಿಘ್ನೇಶ' ಎಂದು ಭಾವಿಸಿಕೊಂಡು 'ವರ್ಗಾವಣೆ ಪತ್ರ'ವನ್ನು ನೀಡುವಂತೆ ಕೋರಿ ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಗುಲ್ಬರ್ಗಾ ಜಿಲ್ಲೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 'ಸನ್ನಿಧಿ' ಎಂದು ಭಾವಿಸಿಕೊಂಡು ನಿಮ್ಮ ಶಾಲಾ ಶೈಕ್ಷಣಿಕ ಪ್ರವಾಸದ ಬಗ್ಗೆ ಶಿವಮೊಗ್ಗದಲ್ಲಿರುವ ಗೆಳತಿ 'ಆಶಿಕಾ'ಳಿಗೆ ಒಂದು ಪತ್ರವನ್ನು ಬರೆಯಿರಿ.